ತೋಟಗಾರಿಕೆ ಫಾರ್ಮ್‌ಗಳನ್ನು ಖಾಸಗಿಗೆ ನೀಡುವುದು

256 (621) ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಫಾರ್ಮ್‌ಗಳ ಅಭಿವೃದ್ಧಿಯ ನೆಪ ಒಡ್ಡಿ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡುತ್ತಿರುವುದು ನಿಜವೇ ;

ಆ) ಈಗಾಗಲೇ ಎಷ್ಟು ತೋಟಗಾರಿಕೆ ಫಾರ್ಮ್‌ಗಳನ್ನು ಗುತ್ತಿಗೆಗೆ ನೀಡಲಾಗಿದೆ ; ಅವು ಯಾವುವು ;

ಇ) ಯಾವ ಆಧಾರದ ಮೇಲೆ ಮತ್ತು ಎಷ್ಟು ಅವಧಿಗೆ ಗುತ್ತಿಗೆ ನೀಡಲಾಗಿದೆ ; ಇದಕ್ಕಿರುವ ಮಾನದಂಡಗಳೇನು ;

ಈ) ಇದರಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ; (ತೋಟಗಾರಿಕೆವಾರು, ವಿಸ್ತೀರ್ಣ ಮತ್ತು ಆದಾಯದ ಮಾಹಿತಿ ನೀಡುವುದು)

ಉ) ಇದು ಅಪಾಯಕಾರಿ ಬೆಳವಣಿಗೆಯಾಗಿದ್ದು, ಇದರಿಂದಾಗಿ ಫಾರ್ಮ್‌ಗಳು ಖಾಸಗಿ / ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಸಿಕ್ಕಿ ಅಧಿಕ ಇಳುವರಿಯ ದುರಾಸೆಯಿಂದ ಸತ್ವ ಕಳೆದುಕೊಂಡು ಫಲವತ್ತತೆ ಹಾಳಾಗಿ ದೀರ್ಘಾವಧಿಯ ರೈತ ವಿರೋಧಿ ಪರಿಣಾಮಗಳ ಬಗ್ಗೆ ಸರ್ಕಾರ ಚಿಂತಿಸಿದೆಯೇ ;

ಊ) ಹಾಗಿದ್ದಲ್ಲಿ, ಏನಾದರೂ ಕಾರ್ಯಕ್ರಮ ರೂಪಿಸಿದೆಯೇ ; (ವಿವರ ನೀಡುವುದು) ?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):

ಅ) ತೋಟಗಾರಿಕೆ ಫಾರ್ಮ್‌ಗಳ ಅಭಿವೃದ್ಧಿಯ ನೆಪ ಒಡ್ಡಿ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡುತ್ತಿರುವುದು ನಿಜವಲ್ಲ. ಈ ಕ್ಷೇತ್ರಗಳನ್ನು ಗುತ್ತಿಗೆ

ಆಧಾರದಲ್ಲಿ ಬದಲಾಗಿ ಯೋಜನಾ ಅಭಿವೃದ್ಧಿ ಮತ್ತು ಅನುಷ್ಠಾನ ಒಪ್ಪಂದದ ಮೇಲೆ ಮಾತ್ರ ನೀಡಲಾಗುವುದು.

ತೋಟಗಾರಿಕೆ ಕ್ಷೇತ್ರಗಳನ್ನು ಇದುವರೆವಿಗೆ ಇಲಾಖೆ ವತಿಯಿಂದಲೇ ಅಭಿವೃದ್ಧಿಪಡಿಸಲಾಗುತ್ತಿದ್ದು, ಇನ್ನೂ ಅಭಿವೃದ್ಧಿ ಹೊಂದದೇ ಇರುವ ಜಾಗದಲ್ಲಿ ಹಾಗೂ ಅಭಿವೃದ್ಧಿಯಾಗಲಿರುವ ಪ್ರದೇಶದಲ್ಲಿ ಆಧುನಿಕ ತೋಟಗಾರಿಕಾ ತಂತ್ರಜ್ಞಾನಗಳನ್ನು ಅಳವಡಿಸಿ ಈ ಕ್ಷೇತ್ರಗಳನ್ನು ಸುತ್ತ ಮುತ್ತಲ ರೈತರಿಗೆ ಪ್ರಾತ್ಯಕ್ಷತಾ ತಾಕುಗಳಾಗಿ ಮಾರ್ಪಾಟು ಮಾಡಿ ಈ ಮೂಲಕ ರೈತರಿಗೆ ಆಧುನಿಕ ತೋಟಗಾರಿಕೆ ತಂತ್ರಜ್ಞಾನವನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅ) ಮೊದಲ ಹಂತದಲ್ಲಿ 13 ತೋಟಗಾರಿಕೆ ಕ್ಷೇತ್ರಗಳನ್ನು ಸರ್ಕಾರಿ – ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ ಕ್ಷೇತ್ರಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಹೆಚ್ಚಿನ ಬಿಡ್ಡು ಮಾಡಿದ ಬಿಡ್ಡುದಾರರಿಗೆ 30 ವರ್ಷಗಳ ಅವಧಿಗೆ ಯೋಜನಾ ಅಭಿವೃದ್ಧಿ ಮತ್ತು ಅನುಷ್ಠಾನ ಒಪ್ಪಂದದ ಮೇಲೆ ಕ್ಷೇತ್ರಗಳನ್ನು ನೀಡಲಾಗುವುದು.

ಈ ಒಪ್ಪಂದದಲ್ಲಿ ಕೆಳಕಂಡ ನಿಬಂಧನೆಗಳನ್ನು ಅನುಸರಿಸಲಾಗುವುದು.

* ಭೂಮಿಯ ಒಡೆತನ ಇಲಾಖೆಯ ಹೆಸರಿನಲ್ಲೇ ಇರುತ್ತದೆ.
* ಖಾಸಗಿ ಬಂಡವಾಳ ಹೂಡಿಕೆಯನ್ನು ಇಲಾಖೆಯು ಗುರುತಿಸಿರುವ ತೋಟಗಾರಿಕೆ ಅಭಿವೃದ್ಧಿಗೆ ಪೂರಕವಾದ

ವಿಷಯಾಧಾರಗಳು (Themes) ಹಾಗೂ ಅವುಗಳಡಿ ಕೈಗೊಳ್ಳುವ ಚಟುವಟಿಕೆಗಳಿಗೆ ನಿಬಂಧಿಸಲಾಗುವುದು.

* ಗುರುತಿಸಲಾಗಿರುವ ಕ್ಷೇತ್ರಗಳಲ್ಲಿನ ಅಭಿವೃದ್ಧಿಯಾಗಿರುವ ಹಾಗೂ ಅಭಿವೃದ್ಧಿಯಾಗಬೇಕಾಗಿರುವ ಪ್ರದೇಶಗಳಿಗೆ ಸೂಕ್ತ ಚಟುವಟಿಕೆಗಳನ್ನು ಇಲಾಖೆ ಗುರುತಿಸುವುದು.

* ಖಾಸಗಿ ಬಂಡವಾಳ ಹೂಡಿಕೆದಾರರು ಪ್ರತಿ ಕ್ಷೇತ್ರಗಳಲ್ಲಿ ವಿವಿಧ ಚಟುವಟಿಕೆಗಳಿಗೆ ನೀಡುವ Upfront Fee ಮತ್ತು Annual Fee ಆಧಾರದ ಮೇಲೆ ಬಂಡವಾಳ ಹೂಡಿಕೆದಾರರನ್ನು ಆಯ್ಕೆ ಮಾಡುವುದು.

ಈ) ಈವರೆವಿಗೂ ಆಯ್ದ ಕ್ಷೇತ್ರಗಳನ್ನು ಖಾಸಗಿಯವರಿಗೆ ವಹಿಸದೇ ಇರುವುದರಿಂದ ಯಾವುದೇ ಆದಾಯ ಬಂದಿರುವುದಿಲ್ಲ. ಪ್ರಸ್ತುತ ಸದರಿ ಕ್ಷೇತ್ರಗಳ ವಾರ್ಷಿಕ ಆದಾಯ ಕೇವಲ ರೂ. 47.57 ಲಕ್ಷ, ಆದರೆ, ಖಾಸಗಿ ಬಂಡವಾಳ ಹೂಡಿಕೆಯಿಂದ ಇಲಾಖೆಗೆ ರೂ. 211.08 ಲಕ್ಷಗಳ ವರೆಗೆ ಆದಾಯ ಬರುವ ಅಂದಾಜಿದ್ದು, ಇದರ ಮೇಲೆ ಪ್ರತಿ ವರ್ಷ ಶೇ. 5ರಷ್ಟು ಆದಾಯ ಬರುತ್ತದೆ.

ಉ) ಇದು ಅಪಾಯಕಾರಿ ಬೆಳವಣಿಗೆಯಾಗಿರುವುದಿಲ್ಲ, ಕಾರಣ PPP ಮಾದರಿಯಲ್ಲಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದರಿಂದ ಕೆಳಕಂಡ ಅನುಕೂಲತೆಗಳಿವೆ.

* ಕ್ಷೇತ್ರಗಳಲ್ಲಿ ಪರಿಣಿತ ಖಾಸಗಿಯವರು ಆಧುನಿಕ ಮತ್ತು ಹೊಸ ಆವಿಷ್ಕಾರಗಳನ್ನು ಅಳವಡಿಸುವುದರಿಂದ, ಅವು ಮುಂದೆ ಸುತ್ತ ಮುತ್ತಲಿನ ರೈತರಿಗೆ ಪ್ರಾತ್ಯಕ್ಷತೆ / ಜ್ಞಾನ ಸಂಪನ್ಮೂಲ ಕೇಂದ್ರಗಳಾಗುತ್ತವೆ.

* ಈ ಕ್ಷೇತ್ರಗಳಲ್ಲಿ ವಿವಿದ್ದೋದ್ದೇಶ ಚಟುವಟಿಕೆಗಳನ್ನು ಅಳವಡಿಸುವುದರಿಂದ, ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ದೊರೆಯುತ್ತದೆ.

* ಪೂರ್ಣ ಪರಿಣಿತ ಖಾಸಗಿ ಬಂಡವಾಳದಿಂದ ಅಭಿವೃದ್ಧಿ ಪಡಿಸುವುದರಿಂದ ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ.

ಕ್ಷೇತ್ರಗಳ ಫಲವತ್ತತೆ ಹಾಗೂ ಅವುಗಳ ಸಂರಕ್ಷಣೆಯ ಹಿತದೃಷ್ಟಿಯ ಬಗ್ಗೆ ಸರ್ಕಾರದ ಚಿಂತನೆ ಇರುತ್ತದೆ.

ಊ) ಹೌದು. ಕ್ಷೇತ್ರಗಳನ್ನು ಖಾಸಗಿಯವರಿಗೆ ವಹಿಸುವ ಮುನ್ನ ಯೋಜನಾ ಅಭಿವೃದ್ಧಿ ಹಾಗೂ ಅನುಷ್ಠಾನ ಒಪ್ಪಂದ ಮಾಡಿಕೊಳ್ಳಲಾಗುವುದು. ಸದರಿ ಒಪ್ಪಂದದಲ್ಲಿ ಈ ಕೆಳಕಂಡ ಪ್ರಮುಖ ನಿಬಂಧನೆಗಳನ್ನು ಹಾಕಲಾಗುವುದು.

* ಬಿಡ್ದುದಾರರು ಯಾವುದೇ ಹಂತದಲ್ಲಿ ಭೂಮಿಯ ಒಡೆತನ ಹೊಂದಿರುವುದಿಲ್ಲ ಹಾಗೂ ಬೇರೆ ಯಾರಿಗೂ ಪರವಾನಗಿ ಮಾಡುವಂತಿಲ್ಲ.

* ಕ್ಷೇತ್ರದ ಜೈವಿಕ ಸಂಪತ್ತು ಹಾಗೂ ಭೂಮಿಯನ್ನು ಹಾಳು ಮಾಡುವ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳುವಂತಿಲ್ಲ.

* ಕ್ಷೇತ್ರದಲ್ಲಿ ಮಣ್ಣಿನ ಫಲವತ್ತತೆಯನ್ನು ಹಾನಿ ಮಾಡುವಂತಹ ಯಾವುದೇ ರಾಸಾಯನಿಕಗಳನ್ನು ಬಳಸುವಂತಿಲ್ಲ.

* ಕ್ಷೇತ್ರದ ಸಸ್ಯ ಸಂಪತ್ತು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಹಾನಿ ಮಾಡುವಂತಿಲ್ಲ.

ಅನುಬಂಧ–1

ಮೊದಲ ಹಂತದಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಆಯ್ಕೆಯಾದ 13 ತೋಟಗಾರಿಕೆ ಕ್ಷೇತ್ರಗಳು

ಕ್ರ. ಸಂ.	ಕ್ಷೇತ್ರಗಳ ಹೆಸರು
1	ಧರ್ಮವೀರ ತೋಟಗಾರಿಕೆ ಕ್ಷೇತ್ರ, ತುಮಕೂರು ಜಿಲ್ಲೆ
2	ಡಾ: M.H. ಮರಿಗೌಡ ತೋಟಗಾರಿಕೆ ಕ್ಷೇತ್ರ, ತುಮಕೂರು ಜಿಲ್ಲೆ
3	ರಂಗಸ್ವಾಮಿ ಗುಡ್ಡ ತೋಟಗಾರಿಕೆ ಕ್ಷೇತ್ರ, ತುಮಕೂರು ಜಿಲ್ಲೆ
4	ಇಂದಿರಾ ತೋಟಗಾರಿಕೆ ಕ್ಷೇತ್ರ, ತುಮಕೂರು ಜಿಲ್ಲೆ
5	ಭೀಮನಕೊಲ್ಲಿ ತೋಟಗಾರಿಕೆ ಕ್ಷೇತ್ರ, ಮೈಸೂರು ಜಿಲ್ಲೆ
6	ಯಲಚೇನಹಳ್ಳಿ ತೋಟಗಾರಿಕೆ ಕ್ಷೇತ್ರ, ಮೈಸೂರು ಜಿಲ್ಲೆ
7	ಚಾರ್ಮುಡಿ ತೋಟಗಾರಿಕೆ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆ
8	ಸೋಮನಹಳ್ಳಿ ಕಾವಲ್ ತೋಟಗಾರಿಕೆ ಕ್ಷೇತ್ರ, ಹಾಸನ ಜಿಲ್ಲೆ
9	ಚೌರಗಲ್ ತೋಟಗಾರಿಕೆ ಕ್ಷೇತ್ರ, ಹಾಸನ ಜಿಲ್ಲೆ
10	ಗುಂಜೇವು ತೋಟಗಾರಿಕೆ ಕ್ಷೇತ್ರ, ಹಾಸನ ಜಿಲ್ಲೆ
11	ಮಾದಾಪುರ ತೋಟಗಾರಿಕೆ ಕ್ಷೇತ್ರ, ಮಡಿಕೇರಿ ಜಿಲ್ಲೆ
12	ಮಾದಲಾಪುರ ತೋಟಗಾರಿಕೆ ಕ್ಷೇತ್ರ, ಮಡಿಕೇರಿ ಜಿಲ್ಲೆ
13	ರಾಮಸಮುದ್ರ ತೋಟಗಾರಿಕೆ ಕ್ಷೇತ್ರ, ಉಡುಪಿ ಜಿಲ್ಲೆ

ಟ್ರ್ಯಾಕ್ಟರ್ ಮತ್ತು ಮಿನಿ ಟ್ರ್ಯಾಕ್ಟರ್‌ಗಳಿಗೆ ಸಹಾಯ ಧನ ನೀಡುವುದು

257 (622) ಶ್ರೀ ಜಯಚಂದ್ರ ಟಿ.ಬಿ. (ಶಿರಾ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?